ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಎಡಪಂಥೀಯ ವಾದದ ಹೆಸರಿನಲ್ಲಿ ಕಮ್ಯುನಿಸ್ಟ್ ಬೆಂಬಲಿತರು ಹಿಂಸಾವಾದಕ್ಕಿಳಿದಿರುವುದನ್ನು ಖಂಡಿಸಿ ಆರ್‌ಎಸ್‌ಎಸ್ ಕಾರ್ಯಕರ್ತರು ಪುರಭವನದ ಎದುರು ಪ್ರತಿಭಟನೆ ನಡೆಸಿದರು


ಸಂಪುಟ : 38 ಸಂಚಿಕೆ : 4 ದುರ್ಮುಖಿ–ಆಶ್ವಯುಜ ಕಲಿಯುಗಾಬ್ದ 5118 1–10–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

## ನೀರು : ಮುಂದಿನ ಪೀಳಿಗೆಗೆ ತೀರಿಸಬೇಕಿರುವ ಋಣ

# ಜಗಳ ಸಾಕು; ಪರ್ಯಾಯಗಳೆಡೆಗೆ ಚಿಂತಿಸೋಣ

ತಮಿಳುನಾಡು, ಕರ್ನಾಟಕದ ನಡುವೆ ಕಾವೇರಿ ನದಿ ನೀರಿನ ವಾಗ್ವಾದ, ಸುಪ್ರೀಂ ಕೋರ್ಟ್ ತೀರ್ಪಿನ ನಂತರದ ಬೆಳವಣಿಗೆ ಆತಂಕ ಹುಟ್ಟಿಸುತ್ತದೆ. ನೀರಿಗಾಗಿ ಹೋರಾಟ ಮುಂದೊಂದು ದಿನ ದೇಶಗಳ ಮಧ್ಯೆ ಯುದ್ಧವನ್ನು ಸೃಷ್ಟಿಸುತ್ತದೆ ಎಂಬ ವಿಶ್ಲೇಷಕರ ಮಾತುಗಳು ನಿಜವೆ ಇರಬಹುದೇನೋ ಎಂಬಂತೆ ಭಾಸವಾಗುತ್ತಿದೆ. ಜಲಮೂಲಗಳು ದುರ್ಲಭವಾಗುತ್ತಿರುವುದೇ ಈ ಜಗಳಗಳಿಗೆ ಕಾರಣವೆಂಬುದಂತೂ ಎಲ್ಲರೂ ಒಪ್ಪುವ ವಾದ. ಕೇವಲ ಭಾರತದಲ್ಲಷ್ಟೇ ಅಲ್ಲ ಪ್ರಪಂಚದ ಬಹುತೇಕ ಪ್ರದೇಶಗಳಲ್ಲಿ ಶುದ್ಧ ನೀರಿನ ಅಭಾವ ಎದುರಾಗುತ್ತಿರುವುದು ತಿಳಿದಿರುವ ಸಂಗತಿ. ಭೂಮಿಯ 70% ಭಾಗ ನೀರಿನಿಂದಲೇ ಆವೃತವಾಗಿದೆಯಾದರೂ ಇದರಲ್ಲಿರುವ 97.5% ನೀರು ಸಮುದ್ರ, ಸಾಗರಗಳಲ್ಲಿರುವ ಉಪ್ಪು ನೀರಾಗಿದೆ. ಇನ್ನುಳಿದ 2.5% ಮಾತ್ರ ಶುದ್ಧ ನೀರು. ಈ ಶುದ್ಧ ನೀರಿನ ಪೈಕಿ ಸುಮಾರು 69.5%ದಷ್ಟು ನೀರು ಹಿಮದ ರೂಪದಲ್ಲಿದೆ, 30.1% ನೀರು ಅಂತರ್ಜಲದ ರೂಪದಲ್ಲಿ ಹಾಗೂ ಇನ್ನುಳಿದ ಕೇವಲ 0.4% ನೀರು ಮಾತ್ರ ಭೂಮಿಯ ಮೇಲ್ಭಾಗದಲ್ಲಿದೆ.

### ಭೂಮಿಯಲ್ಲಿರುವ ನೀರು




ನದಿಗಳು, ಕೆರೆಗಳು, ಸರೋವರಗಳು ಕಲುಷಿತಗೊಳ್ಳುತ್ತಿವೆ, ಬತ್ತಿಹೋಗುತ್ತಿವೆ, ವರ್ಷದಿಂದ ವರ್ಷಕ್ಕೆ ಅಂತರ್ಜಲ ಪ್ರಮಾಣ ಕಡಿಮೆಯಾಗುತ್ತಿದೆ. ಭಾರತದ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ (ಸಿ.ಪಿ.ಸಿ.ಬಿ.) ಮಾಹಿತಿಯ ಪ್ರಕಾರ ದೇಶದ ಅರ್ಧಕ್ಕೂ ಹೆಚ್ಚಿನ ನದಿಗಳು ಕಲುಷಿತಗೊಂಡಿವೆ. ಸಿ.ಪಿ.ಸಿ.ಬಿ.ಯ ಮೌಲ್ಯಮಾಪನದ ಪ್ರಕಾರ "ಕಲುಷಿತ" ಎಂದು ವ್ಯಾಖ್ಯಾನಿಸಬಹುದಾದ ನದಿಗಳ ಸಂಖ್ಯೆ 2010ರಲ್ಲಿ 121ರಷ್ಟಿತ್ತು. ಐದು ವರ್ಷಗಳಲ್ಲಿ ದ್ವಿಗುಣಗೊಂಡಿರುವ ಈ ಸಂಖ್ಯೆ 2015ರ ವೇಳೆಗೆ 275ರಷ್ಟಾಗಿತ್ತು ಎನ್ನುವುದು ನಿಜಕ್ಕೂ ಗಾಬರಿಯಾಗಿಸುವ ವಿಷಯ. ಈ ಪ್ರಮಾಣದ ಮಾಲಿನ್ಯಕ್ಕೆ ಅತಿ ಮುಖ್ಯ ಕಾರಣ ನದಿ ಹಾಗೂ ಇನ್ನಿತರ ಶುದ್ಧನೀರಿನ ಮೂಲಗಳಿಗೆ ಸೇರುತ್ತಿರುವ ನಗರ ಪ್ರದೇಶಗಳ ಚರಂಡಿ ನೀರು. ಈ ವಿಷಯವನ್ನು ಖಚಿತಪಡಿಸಿಕೊಳ್ಳಲು ನಾವೆಲ್ಲೂ ದೂರ ಸಾಗಬೇಕಿಲ್ಲ, ಒಮ್ಮೆ ಬೆಂಗಳೂರಿನ ಸ್ಥಿತಿಯನ್ನು ಗಮನಿಸಿದರೆ ಸಾಕು. ಕೆಂಪೇಗೌಡ ಹಾಗೂ ಒಡೆಯರ್‌ರಿಂದ ನಿರ್ಮಾಣಗೊಂಡ ಹಲವು ಸುಂದರ ಕೆರೆ/ಸರೋವರಗಳಿಂದ ಪ್ರಸಿದ್ಧಿ ಪಡೆದಿದ್ದ ಬೆಂಗಳೂರಿನಲ್ಲಿಂದು 90%ಕ್ಕೂ ಹೆಚ್ಚು ಕೆರೆಗಳು ಕಲುಷಿತಗೊಂಡಿವೆ ಹಾಗೂ ಅಕ್ರಮವಾಗಿ ಒತ್ತುವರಿಯಾಗಿವೆ. ಐ.ಐ.ಎಸ್.ಸಿ.ಯ ಸಂಶೋಧಕ ಪ್ರೊ॥



ರಾಮಚಂದ್ರ ಟಿ.ವಿ.ಯವರ ನೇತೃತ್ವದಲ್ಲಿ ನಡೆದ ಇತ್ತೀಚಿನ ಅಧ್ಯಯನದ ವರದಿಯ ಪ್ರಕಾರ,

- 98% ಕೆರೆಗಳು ಅಕ್ರಮವಾಗಿ ಒತ್ತುವರಿಯಾಗಿವೆ
- 90% ಕೆರೆಗಳಿಗೆ ಘನ ತ್ಯಾಜ್ಯ ಸೇರಿದಂತೆ ಸಂಸ್ಕರಿಸದ ಚರಂಡಿ ಹಾಗೂ ಕೈಗಾರಿಕೆಗಳಿಂದ ಹೊರಹೊಮ್ಮುವ ತ್ಯಾಜ್ಯಗಳ ನಿರಂತರವಾಗಿ ಹರಿಯುತ್ತಿದೆ
- 80 ಕೆರೆಗಳ ನೀರಿನ ಗುಣಮಟ್ಟದ ವಿಶ್ಲೇಷಣೆಯ ಪ್ರಕಾರ, ಒಂದು ಕೆರೆಯನ್ನು ಹೊರತುಪಡಿಸಿ ಇನ್ಯಾವ ಕೆರೆಯ ನೀರು ಕುಡಿಯಲು ಯೋಗ್ಯವಾಗಿಲ್ಲ.
- ಕೆಲ ಕೆರೆಗಳಲ್ಲಿ ಮೀನುಗಳು ಸಾವು ವರದಿಯಾದರೆ, ಇನ್ನು ಕೆಲವುದರಲ್ಲಿ ಬಿಳಿಯ ನೊರೆ ಕಾಣ ಸಿಗುತ್ತಿದೆ; ಬೆಂಕಿಯೂ ಕಾಣಿಸಿಕೊಂಡಿರುವ ವರದಿಗಳಾಗಿವೆ.

ಇದು ಇಂದಿನ ನಗರಗಳ ಪರಿಸ್ಥಿತಿಯಾದರೆ, ಹಳ್ಳಿಗಳ ಸ್ಥಿತಿಯೂ ಹೆಚ್ಚೇನು ಭಿನ್ನವಾಗಿಲ್ಲ. ಕ್ಷೀಣಿಸುತ್ತಿರುವ ನೀರಿನ ಮೂಲಗಳು ಒಂದೆಡೆಯಾದರೆ, ಪ್ರತಿದಿನ ಹೆಚ್ಚುತ್ತಿರುವ ನೀರಿನ ಬೇಡಿಕೆ ಇನ್ನೊಂದೆಡೆ. ಕಳೆದ 50 ವರ್ಷಗಳಲ್ಲಿ ವಿಶ್ವದಾದ್ಯಂತ ನೀರಿನ ಬಳಕೆಯ ಪ್ರಮಾಣ 3ಪಟ್ಟು ಹೆಚ್ಚಾಗಿದೆ. ಇತ್ತೀಚಿನ ದಿನಗಳಲ್ಲಿ ಬದಲಾಗುತ್ತಿರುವ ಜೀವನ ಶೈಲಿ, ಆಹಾರ ಪದ್ಧತಿ ಹಾಗೂ ಹೆಚ್ಚುತ್ತಿರುವ ಜನಸಂಖ್ಯೆ ನೀರಿನ ಬಳಕೆಯ ಪ್ರಮಾಣದಲ್ಲಾಗಿರುವ ಇಂತಹ ಭಾರಿ ಹೆಚ್ಚಳಕ್ಕೆ ಪ್ರಮುಖ ಕಾರಣಗಳಾಗಿವೆ. ಕೃಷಿಗೆ 70%, ಉದ್ಯಮಗಳಿಗೆ 20% ಹಾಗೂ ಮನೆಬಳಕೆಗೆ 10% ನೀರನ್ನು ಉಪಯೋಗಿಸಲಾಗುತ್ತಿದೆ.

ಪ್ರಪಂಚದಲ್ಲೇ ಅತ್ಯಂತ ಹೆಚ್ಚು ಮಳೆಯಾಗುವ ರಾಷ್ಟ್ರಗಳ ಪಟ್ಟಿಯಲ್ಲಿ ಎರಡನೆ ಸ್ಥಾನದಲ್ಲಿದೆ ಭಾರತ. ಆದರೂ ನೀರಿನ

*(2ನೇ ಪುಟಕ್ಕೆ)*

### ಕೃಷಿಕಾರ್ಯಗಳಿಗೆ ಪೂರೈಕೆಯಾಗುವ ನೀರು ಪೋಲಾಗದಂತೆ ನೋಡಿಕೊಳ್ಳುವ ಅಗತ್ಯವೂ ಇಂದು ಇದೆ. ಆ ನಿಟ್ಟಿನಲ್ಲಿ ಮಾಡಬಹುದಾದುದೇನು?

#### ಹನಿ ನೀರಾವರಿ ಪದ್ಧತಿ

ಎಲ್ಲರಿಗೂ ತಿಳಿದಿರುವ ಹಾಗೆ ಈ ಪದ್ಧತಿಯಿಂದ ಸಸ್ಯಗಳಿಗೆ ಹನಿ ಹನಿಯಾಗಿ ನೀರನ್ನು ಒದಗಿಸುವುದಾಗಿದೆ. ವಿಜ್ಞಾನಿಗಳು ಮತ್ತೊಂದು ಹೆಜ್ಜೆ ಮುನ್ನಡೆದು ಈ ನೀರನ್ನೂ ಪೋಲಾಗದಂತೆ ತೇವಾಂಶವನ್ನು ಗುರುತಿಸುವ ಸೆನ್ಸರ್‌ಗಳನ್ನು ತಯಾರಿಸಿದ್ದಾರೆ. ನಮ್ಮಲ್ಲಿ ಹನಿ ನೀರಾವರಿಯನ್ನು ಕೆಲವೇ ಕೃಷಿಕಾರರು, ಕೆಲವೇ ಬೆಳೆಗಳಿಗೆ ಬಳಸುತ್ತಿದ್ದಾರೆ. ನಮ್ಮಲ್ಲಿ ಬೆಳೆಯುವ ಕಬ್ಬು, ಭತ್ತಕ್ಕೆ ನೀರಿನ ಕಟ್ಟೆ ಕಟ್ಟುವ ಬದಲು ಈ ಪದ್ಧತಿಯಿಂದ ಬೆಳೆಯಲೂ ಬಳಸಬಹುದು ಎಂಬುದನ್ನು ಕೆಲ ದೇಶಗಳು ತೋರಿಸಿಕೊಟ್ಟಿವೆ. ಆದರೆ ಅದನ್ನು ಅಭ್ಯಸಿಸಿ ಕಾರ್ಯರೂಪಕ್ಕೆ ತರುವ ಕೃಷಿಕರು ಹೆಚ್ಚಾಗಬೇಕಿದೆ. ಕೃಷಿವಿಜ್ಞಾನಿಗಳು ಈ ನಿಟ್ಟಿನಲ್ಲಿ ರೈತರುಗಳಿಗೆ ಬೋಧಿಸಬೇಕಿರುವ ತುರ್ತು ಅಗತ್ಯ ಕಾಣುತ್ತದೆ. ಕಾರಣ ವಿಶ್ವ ಜಲ ಸಂಸ್ಥೆಯ ಪ್ರಕಾರ ಒಂದು ಕೆ.ಜಿ. ಸಕ್ಕರೆ ತಯಾರಿಸಲು 1500 ಲೀಟರ್ ನೀರು ಸಾಕು. ಆದರೆ ಇಂದಿಗೂ ನಮ್ಮ ದೇಶದಲ್ಲಿ ಅದೇ ಪ್ರಮಾಣದ ಸಕ್ಕರೆ ತಯಾರಿಸಲು ತಗಲುವ ನೀರು ಬರೋಬ್ಬರಿ 4500 ಲೀಟರ್.

#### ನೀರಿನ ಹೊಂಡಗಳು

ವ್ಯವಸಾಯದ ಭೂಮಿಯ ಹತ್ತಿರವೇ ನೀರಿನ ಹೊಂಡಗಳನ್ನು ತಯಾರಿಸಿ, ಅವುಗಳಲ್ಲಿ ಮೀನು ಬೆಳೆದು, ಗೊಬ್ಬರಯುಕ್ತ ನೀರನ್ನು ವ್ಯವಸಾಯಕ್ಕೆ ಬಳಸುವುದು ಒಂದು ಬಗೆಯಾಗಿದೆ. ಹೀಗೆ ಮಾಡುವಾಗ, ನೀರಿನ ಹೊಂಡಗಳು ಪರಿಶುದ್ಧ ಜಲವೇ ಆಗಿರಬೇಕೆಂದಿಲ್ಲ. ಮೀನು ಸಾಕಾಣಿಕೆಯನ್ನೂ ಮಾಡುವುದರಿಂದ ಗೊಬ್ಬರದ ಅಂಶವಿರುವುದರಿಂದ ವ್ಯವಸಾಯಕ್ಕೆ ಯೋಗ್ಯ ನೀರು ದೊರಕುತ್ತದೆ.

#### ವಾತಾವರಣದ ಪಸೆ ಬಳಸುವಿಕೆ

ಇಸ್ರೇಲ್ ಬರಡು ಭೂಮಿಗಳಲ್ಲಿ ಹೊಸತಾಗಿ ನೀರನ್ನು "ತಯಾರಿಸುವ" ಪದ್ಧತಿ ಆರಂಭಗೊಂಡಿದೆ. ಅದೇನೆಂದರೆ ಹವೆಯಲ್ಲಿನ ತೇವಾಂಶವನ್ನು ಹಿಡಿದಿಟ್ಟು, ಆ ನೀರನ್ನು ಸಂಗ್ರಹಿಸಿ ವ್ಯವಸಾಯಕ್ಕೆ ಬಳಸುವುದು. ಇದೊಂದು ವಿನೂತನ ಹಾಗೂ ಯಶಸ್ಸು ಕಂಡಿರುವ ದಾರಿಯೇ ಆದರೂ ತಗಲುವ ವೆಚ್ಚ ಸ್ವಲ್ಪ ಅಧಿಕವೆನಿಸಿದರೂ ಅಸಾಧ್ಯವಾದುದೇನಲ್ಲ.



ಅಭಾವ ಎದುರಾಗುತ್ತಿರುವುದಕ್ಕೆ ಕಾರಣ ಸಮರ್ಪಕವಾಗಿ ನೀರಿನ ನಿರ್ವಹಣೆ ಮಾಡದಿರುವುದು. ಹಾಗಿದ್ದರೆ ನೀರಿನ ಸಮಸ್ಯೆಗೆ ಪರಿಹಾರವೇನು, ಈ ನಿಟ್ಟಿನಲ್ಲಿ ಮಾಡಬಹುದಾದ ಮತ್ತು ಮಾಡಬೇಕಾದ ಕೆಲ ಪ್ರಮುಖ ಕೆಲಸಗಳೇನು?

### ಕೊಳಚೆ ನೀರಿನ ಪುನರ್ಬಳಕೆ

ಸ್ನಾನ, ಶೌಚಕ್ಕೆ ಇತ್ಯಾದಿ ಕಾರ್ಯಗಳಿಗೆ ನೀರನ್ನು ಬಳಸುತ್ತೇವಾದರೂ, ಆ ಬಳಕೆಯಾದ ನೀರನ್ನು ಪುನರ್ ಶುದ್ಧಿಗೊಳಿಸುವ ಗೋಜಿಗೆ ನಾವು ಹೋಗುತ್ತಿಲ್ಲ. ಬಟ್ಟೆ, ಪಾತ್ರೆಗಳನ್ನು ಹೇಗೆ ತೊಳೆದು ಉಪಯೋಗಿಸುತ್ತೇವೆಯೋ ಅಂತೆಯೇ ನೀರನ್ನೂ ಪುನರ್ಬಳಕೆ ಮಾಡಬಹುದಾಗಿದೆ. ಕರ್ನಾಟಕದ ಕೆಲ ಕಡೆಗಳಲ್ಲಿ ಕೊಳಚೆ ನೀರನ್ನು ತಕ್ಕಮಟ್ಟಿಗೆ ಶುದ್ಧೀಕರಿಸಿ ಉಪವನಗಳ ಅಭಿವೃದ್ಧಿಗೆ ಕೆರೆಗಳ ಪುನಶ್ಚೇತನಕ್ಕೆ ಬಳಸುತ್ತೇವೆ. ಆದರೆ ನಮ್ಮ ಬಳಕೆಯನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ಪುನರ್ಬಳಕೆಯಾಗುತ್ತಿರುವ ನೀರಿನ ಪ್ರಮಾಣ ಬಹಳ ಕಡಿಮೆ. ಸಮೀಕ್ಷೆಗಳ ಪ್ರಕಾರ ಇಸ್ರೇಲ್ 86% ತಮ್ಮ ನೀರನ್ನು ಪುನರ್ಬಳಕೆ ಮಾಡುತ್ತಿದೆ. ಹತ್ತಿರದ ಪ್ರತಿಸ್ಪರ್ಧಿ ಎಂದರೆ ಸ್ಪೈನ್ ಎಂಬ ದೇಶ 15% ಪುನರ್ಬಳಕೆ ಮಾಡುತ್ತಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರವೆನಿಸಿಕೊಂಡಿರುವ ಯುಎಸ್ಎ ಪುನರ್ಬಳಕೆ ಮಾಡುವ ಪ್ರಮಾಣ ಕೇವಲ 5%. ಇನ್ನು ಭಾರತದಲ್ಲಿನ ಸಂಖ್ಯೆ ಮುಜುಗರ ತರುತ್ತದೆ. ಹೀಗೆ ಪುನರ್ಬಳಕೆಯಾಗುವ ನೀರು ಕೃಷಿಗೆ ಯೋಗ್ಯವೆಂದು ತಿಳಿದುಬಂದಿದೆ. ಸಿಂಗಪೂರವು 2030 ಹೊತ್ತಿಗೆ ತನ್ನ ದೇಶದ ಅರ್ಧ ಬೇಡಿಕೆಯನ್ನು ಈ ಮೂಲಕವೇ ಪೂರೈಸುವ ಉದ್ದೇಶವನ್ನು ಹೊಂದಿದೆ.

### ಮಳೆನೀರು ಕೊಯ್ಲು

ಮಳೆಗಾಲದಲ್ಲಿ ಲಭ್ಯವಿರುವ ಮಳೆ ನೀರನ್ನು ಸಂಗ್ರಹಿಸಿ ಬಳಸುವ, ಅಥವಾ ಭೂಮಿಗೇ ಇಂಗಿಸಿ ಅಂತರ್ಜಲ ಮಟ್ಟವನ್ನು ಏರಿಸುವ ಪದ್ಧತಿಗಳು ಕಾಗದದ ಮೇಲಷ್ಟೆ ಇದೆ. ಇವುಗಳನ್ನು ಅಭ್ಯಸಿಸಲು ಜನರಲ್ಲಿ ಹಿಂಜರಿಕೆ ಎದ್ದು ತೋರುತ್ತಿದೆ. ಹೀಗೆ ಸಂಗ್ರಹಿಸುವ ನೀರನ್ನೇ ಅವಲಂಬಿಸಿ ಮಿತ ಬಳಕೆಯನ್ನೂ ಮಾಡುವವರು ಉದಾಹರಣೆಯಾಗಿ ನಮಗೆ ಸಿಗುತ್ತಾರಾದರೂ, ಇಂತಹವರ ಸಂಖ್ಯೆ ಹೆಚ್ಚಾಗಬೇಕಿದೆ. ಇದರ ಜೊತೆಜೊತೆಗೇ ಆಗಬಹುದಾದ ಮತ್ತೊಂದು ಅಂಶವೆಂದರೆ ಪರಿಸರ ಸಂರಕ್ಷಣೆಯ ಮಹತ್ಕಾರ್ಯ. ಈ ನಿಟ್ಟಿನಲ್ಲಿ ಕೆರೆ, ಕಲ್ಯಾಣಿಗಳನ್ನು ಶುದ್ಧಿಕರಿಸುವುದು, ಹೂಳೆತ್ತುವುದು, ಚೆಕ್‌ಡ್ಯಾಮ್ ನಿರ್ಮಾಣ, ಸಸಿ ನೆಡುವುದು ಇತ್ಯಾದಿ ದೇಶದ ಹಲವು ಭಾಗಗಳಲ್ಲಿ ಜನರೇ ಸ್ವಯಂಪ್ರೇರಿತರಾಗಿ ತೊಡಗಿಕೊಂಡಿರುವ ಸುದ್ದಿಗಳು ಇತ್ತೀಚಿನ ದಿನಗಳಲ್ಲಿ ಕಾಣಸಿಗುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.


### ಉಪ್ಪು ನೀರನ್ನು ಸಿಹಿ ನೀರಾಗಿಸುವುದು

ತಮಿಳುನಾಡು, ಕರ್ನಾಟಕ ನಡುವಿನ ಕಾವೇರಿ ಗಲಾಟೆಯ ಹೊತ್ತಿಗೆ, ಸಂಸದ ಸುಬ್ರಮಣ್ಯಂ ಸ್ವಾಮಿ ಒಂದು ಅಮೂಲ್ಯ ಸಲಹೆಯನ್ನು ಇತ್ತರು. ಸಮುದ್ರದ ಉಪ್ಪು ನೀರನ್ನು ಕೂಡಿಯುವ ನೀರಾಗಿ ಪರಿವರ್ತಿಸುವುದೇ ಅದಾಗಿತ್ತು. ಸೌದಿ ಅರೇಬಿಯಾ, ಇಸ್ರೇಲ್ ದೇಶಗಳಲ್ಲಿ ಈ ಚಟುವಟಿಕೆ ರೂಢಿಯಲ್ಲಿದೆ. ಆ ದೇಶಗಳಲ್ಲಿ ಸಿಗುವ ಸಿಹಿ ನೀರು ಹೀಗೆ ಪರಿವರ್ತಿತವಾದದ್ದು. ಕೆಲ ವರ್ಷಗಳ ಕಾಲ ಇಂತಹದ್ದೊಂದು ಪ್ರಯೋಗದಿಂದ ಜಲಚರಗಳಿಗೆ ಅಪಾಯ ಉಂಟಾಗಬಹುದು ಎಂದು ಅನುಮಾನಿಸಲಾಗಿತ್ತು. ಹಲವು ದೇಶಗಳು ಇದನ್ನು ಸಂಪೂರ್ಣವಾಗಿ ಅಲ್ಲಗಳೆದಿವೆ ಹಾಗೂ ಪರಿಸರಕ್ಕೆ ಯಾವ ಹಾನಿಯೂ ಆಗುವುದಿಲ್ಲವೆಂದು ಸಾಬೀತು ಮಾಡಿವೆ. ನೀರಿಗಾಗಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಈ ತಂತ್ರಜ್ಞಾನವನ್ನು ಬೆಳಸುವ ಕೆಲಸಗಳಾಗುತ್ತಿವೆ. ಭಾರತ ಸುಮಾರು 7600 ಕಿ.ಮೀ. ನಷ್ಟು ಕಡಲತೀರವನ್ನು ಹೊಂದಿದೆ ಹಾಗೂ ನೀರಿನ ಅಭಾವವಿರುವ ಹಲವು ಪ್ರದೇಶಗಳಲ್ಲಿ ಈಗಾಗಲೇ ನೀರಿನಿಂದ ಉಪ್ಪಿನಾಂಶ ತೆಗೆಯುವ ಸ್ಥಾವರಗಳು ಕಾರ್ಯನಿರ್ವಹಿಸುತ್ತಿವೆ.

ಒಟ್ಟಿನಲ್ಲಿ ಸಾಮಾನ್ಯಾತಿ ಸಾಮಾನ್ಯ ನಾಗರೀಕನೂ ಅಸಾಮಾನ್ಯನಂತೆ ನೀರಿನ ಬಗ್ಗೆ ಕೊಂಚ ಹೆಚ್ಚು ಆಸ್ಥೆವಹಿಸಿದರೆ ನಮ್ಮ ಜಲ ಮೂಲಗಳನ್ನು ಹೆಚ್ಚು ವರ್ಷಗಳ ಕಾಲ ಉಳಿಸಿಕೊಳ್ಳಬಹುದು. ಜಲ ನಾವು ನಮ್ಮ ಪೂರ್ವಿಕರಿಂದ ಪಡೆದ ಆಸ್ತಿ ಎನ್ನುವ ಧೋರಣೆಗಿಂತ ನಮ್ಮ ಮುಂದಿನ ಪೀಳಿಗೆಗೆ ತೀರಿಸಬೇಕಿರುವ ಋಣ ಎಂಬುದನ್ನು ನಮಗೆ ನಾವೇ ಮನದಟ್ಟು ಮಾಡಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಬೋಧನೆ, ಶಿಕ್ಷಣದ ಜೊತೆಗೆ ಸಮ್ಯಕ್ ಅಭ್ಯಾಸ ನಡೆಸಿದರೆ ಉತ್ತಮ ಸಾಧನೆಗೈಯಬಹುದಾಗಿದೆ. ವಿಶ್ವಕ್ಕೇ ಮಾದರಿಯಾಗಬಹುದಾಗಿದೆ.

**ಬಿಡುಗಡೆಗೊಂಡಿದೆ...**

## ನವೋತ್ಥಾನದ ಅಧ್ವರ್ಯುಗಳು




ಅದೆಷ್ಟು ಆಕ್ರಮಣಗಳು, ವಿದೇಶಿ ದಾಸ್ಯದ ಹೊಡೆತ ಹೀಗೆ ಹಲವು ಆಘಾತಗಳನ್ನು ದೀರ್ಘಕಾಲದವರೆಗೆ ಎದುರಿಸಿಕೊಂಡು ಬಂದ ಭಾರತ ಎಂಥದ್ದೇ ಸಂಕಷ್ಟ, ವಿಪ್ಲವ, ತಲ್ಲಣದ ಸಮಯದಲ್ಲೂ ಅಂತಃಸತ್ವವನ್ನು ಕಳೆದುಕೊಳ್ಳಲಿಲ್ಲ. ದೇಶದ ಸಾಂಸ್ಕೃತಿಕ ರಾಜಕೀಯ ವಲಯದಲ್ಲಿ ದಟ್ಟಾಂಧಕಾರ ಕವಿಯುತ್ತಿದೆ ಎನ್ನುವಷ್ಟರಲ್ಲೇ ಭರವಸೆಯ ಹೊಸ ಕಿರಣಗಳು ಗೋಚರವಾಗುತ್ತಿದ್ದವು. ದೇಶವನ್ನು ಆ ನೈರಾಶ್ಯದಿಂದ ಉತ್ಕರ್ಷದೆಡೆಗೆ ಕೊಂಡೊಯ್ಯುವ ಮಹಾಚೇತನಗಳು ಸಮಾಜಕ್ಕೆ ಹೊಸ ದಿಕ್ಕನ್ನು ದರ್ಶಿಸುತ್ತಿದ್ದವು. ಅದರಲ್ಲೂ 18ನೇ ಶತಮಾನದ ಅಂತ್ಯದಿಂದ ಇಪ್ಪತ್ತನೇ ಶತಮಾನದ ಪೂರ್ವಾರ್ಧದವರೆಗೆ ಮಹತ್ತರ ಸ್ಥಿತ್ಯಂತರಗಳಿಗೆ ಸಾಕ್ಷಿಯಾದ ಹಲವಾರು ಮಹಾನ್ ವ್ಯಕ್ತಿಗಳು ಭಾರತೀಯ ಸಮಾಜವನ್ನು ನವಯುಗಕ್ಕೆ ಅಣಿಗೊಳಿಸಿದರು.

ಸ್ವಾತಂತ್ರ್ಯಸಂಘರ್ಷ ಅಪೇಕ್ಷಿಸಿದ ಆತ್ಮವಿಶ್ವಾಸವನ್ನು ಜನತೆಯಲ್ಲಿ ಮೂಡಿಸುವುದಕ್ಕಾಗಿ ಹಾಗೂ ಅದಕ್ಕೆ ತಾತ್ವಿಕ ನೆಲೆಗಟ್ಟನ್ನು ನಿರ್ಮಿಸುವುದಕ್ಕಾಗಿ ನಡೆದ ಧಾರ್ಮಿಕ–ಆಧ್ಯಾತ್ಮಿಕ–ಸಾಮಾಜಿಕ ಕ್ಷೇತ್ರಗಳ ಪ್ರಯಾಸ ಸರಣಿಗಳಿಗೆ ಕಾರಣೀಭೂತರಾದವರು ರಾಜಾರಾಮ ಮೋಹನರಾಯ್‌ರಿಂದ ವಿವೇಕಾನಂದ ಅರವಿಂದರವರೆಗಿನ ಸಾಧಕಶ್ರೇಷ್ಠರು. ಈ ನವಯುಗಕ್ಕೆ ಸಮಾಜವನ್ನು ಅಣಿಗೊಳಿಸಿದವರ ದೂರಗಾಮಿ ಸಾಧನೆಗಳ ವಿಹಂಗಮ ಸಮೀಕ್ಷೆ – 'ನವೋತ್ಥಾನದ ಅಧ್ವರ್ಯುಗಳು' ಪುಸ್ತಕ.

● ಲೇಖಕ: **ಎಸ್.ಆರ್. ರಾಮಸ್ವಾಮಿ** ● ಪ್ರಕಾಶಕರು: **ರಾಷ್ಟ್ರೋತ್ಥಾನ ಸಾಹಿತ್ಯ** ● ಬೆಲೆ: **ರೂ. 200.00**

ಪ್ರತಿಗಳಿಗಾಗಿ ಸಂಪರ್ಕಿಸಿ: **ರಾಷ್ಟ್ರೋತ್ಥಾನ ಸಾಹಿತ್ಯ,** ಕೆಂಪೇಗೌಡ ನಗರ ಬೆಂಗಳೂರು – 560 019
ದೂರವಾಣಿ : 080–26612730



## ಮಧ್ಯಪ್ರಾಚ್ಯದಲ್ಲಿ ಇಂದಿಗೂ ನಡೆದಿದೆ ಕೃಷ್ಣಾರಾಧನೆ

**ಯಹೂದಿಗಳ ನಾಡು ಇಸ್ರೇಲ್‌ನಲ್ಲಿ ಇಂದಿಗೂ ಕೃಷ್ಣ ಜನ್ಮಾಷ್ಟಮಿಯನ್ನು ಸಂಭ್ರಮದಿಂದ ಆಚರಣೆ ಮಾಡಲಾಗುತ್ತದೆ. ಅಷ್ಟೇ ಅಲ್ಲದೇ ಅಲ್ಲಿನ ಭಾರತೀಯರೊಂದಿಗೆ ಆಸಕ್ತಿಯುಳ್ಳ ಸ್ಥಳೀಯರೂ ಭಾಗವಹಿಸಿ 108 ಬಗೆಯ ತಿನಿಸುಗಳನ್ನು ಸಿದ್ಧಪಡಿಸಿ ಶ್ರೀ ಕೃಷ್ಣನನ್ನು ಭಕ್ತಿಯಿಂದ ಪೂಜಿಸುತ್ತಾರೆ. ಮಲೇಷ್ಯಾದಲ್ಲಿ ರಾಮನನ್ನು ಪೂಜಿಸಿದಂತೆ ಇಸ್ರೇಲ್‌ನಲ್ಲಿ ಶ್ರೀಕೃಷ್ಣನನ್ನು ಆರಾಧಿಸುತ್ತಾರೆ. ಮಧ್ಯಪ್ರಾಚ್ಯದ ಕೆಲವು ರಾಷ್ಟ್ರಗಳಲ್ಲಿಯೂ ಶ್ರೀಕೃಷ್ಣನ ಪೂಜನೀಯ ಭಾವನೆ ಹಾಗೂ ನಂಟಿರುವ ಬಗೆಗೆ ಕುರುಹುಗಳಿವೆ, ಇದಕ್ಕೆ ಪೂರಕವಾಗಿ ಇರಾನಿನ ಸುಸ ಎಂಬ ಪ್ರದೇಶದಲ್ಲಿ ಪಾರ್ಥಿಯನ್ ಕಾಲಾವಧಿಯ (ಕ್ರಿ.ಪೂ 247– ಕ್ರಿ.ಶ. 224) ಶ್ರೀಕೃಷ್ಣನ ವಿಗ್ರಹಗಳು ಇತ್ತೀಚೆಗೆ ಪತ್ತೆಯಾಗಿವೆ! ಅಷ್ಟೇ ಅಲ್ಲದೇ ಪಾರ್ಥಿಯನ್ ಎಂಬುದಕ್ಕೂ ಕೃಷ್ಣನಿಗಿರುವ ಪಾರ್ಥಸಾರಥಿ ಎಂಬ ಹೆಸರಿಗೂ ಸಾಮ್ಯತೆ ಇದೆ. ಮಹಾಭಾರತದ ಯುದ್ಧದ ನಂತರ ಯಾದವರಲ್ಲಿ ಕೆಲವರು ಈಗಿನ ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಸೇರುವ ಇರಾನ್ ಇರಾಕ್ ಹಾಗೂ ಇಸ್ರೇಲ್‌ಗಳಿಗೆ ವಲಸೆ ಹೋದರು ಎಂಬ ಪ್ರತೀತಿಯಿದೆ.**

## ಹೆಚ್ಚಿಸಿ ಹಸಿರು, ರೈತನ ಉಸಿರು




ಅನಂತಪುರ ಜಿಲ್ಲೆಯ ರೈತ ಮೇಡ ಮಲ್ಲಯ್ಯ ತಮ್ಮ ಕೃಷಿಗಾಗಿ ಸಂಪೂರ್ಣ ಮಳೆಯನ್ನೇ ಅವಲಂಬಿಸಿದ್ದರು. ತನ್ನ ಎಂಟು ಎಕರೆ ಕೃಷಿ ಭೂಮಿಯಲ್ಲಿ ಸಜ್ಜೆ, ಶೇಂಗಾ ಹಾಗು ಇನ್ನಿತರ ಧಾನ್ಯಗಳನ್ನು ಬೆಳೆಯುತ್ತಿದ್ದ ಮಲ್ಲಯ್ಯ ಮಳೆಯ ಪ್ರಮಾಣ ಕುಸಿದು ಭೂಮಿ ಒಣಗಿ, ನೆಲ ಬರಡಾದಾಗ ಕಂಗಾಲಾದರು. ಬದುಕು ಕಟ್ಟಿಕೊಳ್ಳಲು ಬೆಂಗಳೂರಿಗೆ ಬಂದರು. ಆದರೆ ಅದೇಕೋ ತಮ್ಮ ನೆಲದಿಂದ ದೂರವಾಗಲು ಅವರಿಂದ ಆಗಲೇ ಇಲ್ಲ. ಊರಿಗೆ ಮರಳಿ ಮಾವಿನ ಸಸಿ ನೆಟ್ಟು, ಮಾವು ಬೆಳೆಯನ್ನು ಇತರ ಬೆಳೆಗಳೊಂದಿಗೆ ಪರ್ಯಾಯವಾಗಿ ಬೆಳೆಸತೊಡಗಿದರು. ಇತ್ತ ಮಳೆಯೂ ಚೆನ್ನಾಗಿ ಬಂತು. ಪರಿಣಾಮ ಇಂದು ಹಚ್ಚ ಹಸಿರಿನಿಂದ ನಳನಳಿಸುತ್ತಿರುವ ಮೇಡ ಮಲ್ಲಯ್ಯನವರ ತೋಟ, ಭರ್ಜರಿ ಮಾವು ಫಸಲಿನ ಮೂಲಕ ಪರ್ಯಾಯ ಆದಾಯ ಮೂಲ ದೊರಕಿಸಿಕೊಟ್ಟು ಅವರ ಬದುಕಿಗೆ ಮರು ಜನ್ಮ ನೀಡಿದೆ.

ಮೇಡ ಮಲ್ಲಯ್ಯನವರಂತೆ ಇಂದು ಬೆಂಗಳೂರಿನ ಸುತ್ತಮುತ್ತಲ ಹಲವು ರೈತರಿಗೆ ಹಣ್ಣಿನ ಕೃಷಿಗೆ ಪ್ರೋತ್ಸಾಹ ಕೊಟ್ಟು, ಪರ್ಯಾಯ ಆದಾಯ ಮೂಲದ ಜೊತೆ ಜೊತೆಗೆ, ಹಸಿರು ಹೆಚ್ಚಿಸಲು ಪಣ ತೊಟ್ಟಿರುವ ಬೆಂಗಳೂರು ಮೂಲದ "ಸೇ ಟ್ರೀಸ್ (Say Trees) ಸಂಸ್ಥೆ 2007 ರಿಂದ, ಅವಿರತವಾಗಿ ಶ್ರಮಿಸುತ್ತಿದೆ. ಭಾರತೀಯ ರೈತರು ಎದುರಿಸುತ್ತಿರುವ, ಹಣದ ಸಮಸ್ಯೆ, ವೈಜ್ಞಾನಿಕ ತಿಳುವಳಿಕೆಯ ಕೊರತೆಯನ್ನು ಮನಗಂಡ 'ಸೇ ಟ್ರೀಸ್' ಸಂಸ್ಥೆಯ ಸಂಸ್ಥಾಪಕ ಕಪಿಲ್ ಶರ್ಮ ಅವರು, ತಮ್ಮ ಸಂಸ್ಥೆಯ ಮೂಲಕ ರೈತರಿಗೆ ಹಣ್ಣು ಕೃಷಿಯ ಕುರಿತಾದ ತಿಳುವಳಿಕೆ,



ಪ್ರೋತ್ಸಾಹ ಜೊತೆಗೆ, ಹಣ್ಣಿನ ಸಸಿಗಳನ್ನು ಒದಗಿಸಿ, ರೈತರಿಗೆ ಪರ್ಯಾಯ ಆದಾಯ, ಹಸಿರೀಕರಣ ಹಾಗೂ ಈ ಸಸ್ಯಗಳಿಗೆ ನೀರುಣಿಸುವುದರಿಂದ ಭೂಮಿಯಲ್ಲಿನ ಅಂತರ್ಜಲ ಪ್ರಮಾಣ ಹೆಚ್ಚಿಸುವಲ್ಲಿ ನೆರವಾಗುತ್ತಿದ್ದಾರೆ.

ಈ ಸಂಸ್ಥೆಯು ಕಳೆದ ವರ್ಷ 4 ಸಾವಿರ ಸಸಿಗಳನ್ನು 11 ರೈತರಿಗೆ ಒದಗಿಸುವುದರ ಜೊತೆಗೆ, ತಮ್ಮ ಸ್ವಯಂ ಸೇವಕರ ನೆರವಿನಿಂದ ಸಸಿಗಳ ಪಾಲನೆಗೆ ಅಗತ್ಯ ನೆರವು ಮಾಹಿತಿ ಒದಗಿಸಿ, ವಿತರಣೆಯಾದ ಸಸಿಗಳಲ್ಲಿ 90% ಮಾವು ಗಿಡಗಳು ಬದುಕಿ ರೈತರ ಬಾಳು ಹಸನಾಗಿಸುವುದರೊಂದಿಗೆ, ಹಸಿರು ಹೆಚ್ಚಿಸಿ ಪರಿಸರ ಸಂರಕ್ಷಿಸುವತ್ತ ಮಹತ್ವದ ಕೊಡುಗೆ ನೀಡಿದ್ದಾರೆ. ಈ ವರ್ಷ 13 ರೈತರ ಮೂಲಕ 5000 ಸಸಿ ನೆಟ್ಟಿದ್ದಲ್ಲದೆ, ಮುಂದಿನ ಎರಡು ವಾರಗಳಲ್ಲಿ 10 ರೈತರ ಮೂಲಕ ಇನ್ನೂ 6000 ಮಾವು ಸಸಿ ನೆಟ್ಟು ಸಂರಕ್ಷಿಸುವತ್ತ ಕಾರ್ಯೋನ್ಮುಖವಾಗಿದೆ. ವಿಶ್ವ ಸಂಸ್ಥೆ ಆಯೋಜಿಸಿದ್ದ ವಿಶ್ವ ಅರಣ್ಯ ಕಾಂಗ್ರೆಸ್‌ನಲ್ಲಿ ಭಾಗವಹಿಸಿದ ಕಪಿಲ್ ಶರ್ಮ, ಅಲ್ಲಿ ವಿವಿಧ ದೇಶಗಳ ತಜ್ಞರು ಮಂಡಿಸಿದ್ದ ಕೃಷಿ ಅರಣ್ಯ (Agro Forestry) ವಿಷಯವೇ ತಮ್ಮ ಈ ಪ್ರಯತ್ನಕ್ಕೆ ಪ್ರೇರಣೆ ಎಂದು ಸ್ಮರಿಸುತ್ತಾರೆ.

**ಸಂಪಾದಕೀಯ ಸಹಕಾರ** ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಶ್ರೀವತ್ಸ, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಸತ್ಯನಾರಾಯಣ ಶಾನುಬೋಗ್, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

# ಕೇವಲ ಹಿಂದೂ ಆಚರಣೆಗಳನ್ನೇಕೆ ಪ್ರಶ್ನಿಸುತ್ತೀರಿ: ನ್ಯಾಯಾಲಯ

ಹಿಂದೂ ಹಬ್ಬಗಳ ಆಚರಣೆಯ ವಿರುದ್ಧ ಪದೇ ಪದೇ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡುತ್ತಿದ್ದ ಸಾಮಾಜಿಕ ಕಾರ್ಯಕರ್ತನಿಗೆ ನಾಗಪುರದ ಉಚ್ಚ ನ್ಯಾಯಾಲಯ ಪೀಠ ಛೀಮಾರಿ ಹಾಕಿದೆ. ಸಾರ್ವಜನಿಕ ಗಣೇಶೋತ್ಸವದ ಮೂಲಕ ದೇಶಪ್ರೇಮವನ್ನು ಜಾಗೃತಗೊಳಿಸಿದ ಲೋಕಮಾನ್ಯ ತಿಲಕರ "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ಪಡೆದೇ ತೀರುತ್ತೇನೆ" ಎನ್ನುವ ಘೋಷಣೆಗೆ ನೂರು ವರ್ಷ ಸಂದ ಹಿನ್ನೆಲೆಯಲ್ಲಿ ಅತ್ಯುತ್ತಮ ಪರಿಸರ ಸ್ನೇಹಿ ಗಣೇಶೋತ್ಸವ ಪೆಂಡಾಲ್‌ಗಳಿಗೆ ಬಹುಮಾನ ನೀಡುವುದಾಗಿ ಮಹಾರಾಷ್ಟ್ರ ಸರ್ಕಾರ ಘೋಷಿಸಿತ್ತು. ಜೊತೆಗೆ ಬೇಟಿ ಬಚಾವೋ ಬೇಟಿ ಪಢಾವೋ, ಸಾಕ್ಷರತೆ, ಮದ್ಯಪಾನ ವರ್ಜನೆ, ಜಲಸಂರಕ್ಷಣೆ ಮೊದಲಾದ ವಿಷಯಗಳನ್ನು ಪ್ರಚಾರ ಮಾಡುವ ಗಣೇಶೋತ್ಸವ ಮಂಟಪಗಳಿಗೆ ಬಹುಮಾನ ನೀಡುವುದಾಗಿ ಘೋಷಿಸಿತ್ತು. ಇದು ಸೆಕ್ಯುಲರಿಸಮ್ಮಿಗೆ ವಿರುದ್ಧ ಎಂದು ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿತ್ತು. ಈ ಹಿಂದೆ ನವರಾತ್ರಿಯ ಸಮಯದ ರಾಮಲೀಲಾದಲ್ಲಿ ರಾವಣನ ಮೂರ್ತಿ ದಹನವನ್ನು ಪ್ರಶ್ನಿಸಿ ಇದೇ ಸಾಮಾಜಿಕ ಕಾರ್ಯಕರ್ತ ಮೊಕದ್ದಮೆ ಹೂಡಿದ್ದರು. ಈ ಅರ್ಜಿಯನ್ನು ವಜಾಗೊಳಿಸಿದ ನ್ಯಾಯಪೀಠ ಕೇವಲ ಹಿಂದೂ ಹಬ್ಬಗಳ ಆಚರಣೆಯನ್ನು ಮಾತ್ರ ಪ್ರಶ್ನಿಸುವ ಚಾಳಿಗೆ ಆಕ್ಷೇಪ ವ್ಯಕ್ತಪಡಿಸಿ ಇತರ ಮತಗಳ ಹಬ್ಬಗಳಲ್ಲಿ ಸರ್ಕಾರ ಹಣ ವೆಚ್ಚ ಮಾಡುವುದನ್ನು ಏಕೆ ಪ್ರಶ್ನಿಸುವುದಿಲ್ಲ ಎಂದು ಕೇಳಿತು. ಕಳೆದ ಕೆಲವು ವರ್ಷಗಳಲ್ಲಿ ಹಿಂದೂ ಹಬ್ಬಗಳ ಆಚರಣೆಗಳನ್ನು ಪ್ರಶ್ನಿಸುವ ಅನೇಕ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳು ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಂದಿರುವುದನ್ನು ಗಮನಿಸಬಹುದು. ಭಾರತದ ಸರ್ವೋಚ್ಚ ನ್ಯಾಯಾಲಯವು ತಮಿಳುನಾಡಿನಲ್ಲಿ ಪೊಂಗಲ್ ಸಮಯದಲ್ಲಿ ಜಾಲಿಕಟ್ಟು ಗೂಳಿಕಾಳಗವನ್ನು ನಿರ್ಬಂಧಿಸಿದೆ, ಕೃಷ್ಣಾಷ್ಟಮಿ ಸಂದರ್ಭದಲ್ಲಿ ಆಚರಿಸುವ ದಹಿಹಂಡಿ (ಮೊಸರಿನ ಕುಡಿಕೆ) ಒಡೆಯುವ ಆಚರಣೆಯಲ್ಲಿ 18 ವರ್ಷಕ್ಕಿಂತ ಕಿರಿಯರು ಭಾಗವಹಿಸದಂತೆ, ಮಾನವ ಗೋಪುರದ ಎತ್ತರ 20 ಅಡಿ ಮೀರದಂತೆ ನಿರ್ಬಂಧ ವಿಧಿಸಿರುವ ಉದಾಹರಣೆಗಳನ್ನು ನೋಡಬಹುದು.

## ಸಾಲುದ್ದದ ಸುದ್ದಿಗಳು

ರಾಯಚೂರಿನ ಮಾನ್ವಿ ತಾಲೂಕಿನ ಸಿರವಾರ ಪಟ್ಟಣದ ನಿವಾಸಿ ಜ್ಞಾನಮಿತ್ರ 20 ವರ್ಷಗಳ ಹಿಂದೆ ಇಟ್ಟಿಗೆ ಕಾರ್ಖಾನೆ ವ್ಯಾಪಾರದಲ್ಲಿ ಕೈ ಸುಟ್ಟುಕೊಂಡಿದ್ದರು. ಆಗ ಕಾಣಿಸಿಕೊಂಡ ರೋಗವೊಂದು ಇಡೀ ಕುಟುಂಬವನ್ನೇ ಬಲಿ ಪಡೆಯಿತು. ಜೀವನದಲ್ಲಿ ತಾನು ಅನುಭವಿಸಿದ ನೋವನ್ನು ಮತ್ಯಾರೂ ಅನುಭವಿಸದಿರಲಿ ಅನ್ನುವ ಉದ್ದೇಶದಿಂದ ಸ್ನೇಹಿತರ ಸಹಾಯದಿಂದ ಆಂಬುಲೆನ್ಸ್ ಖರೀದಿಸಿ ಸುತ್ತಮುತ್ತಲ 20 ಊರಿನ ಜನರ ಪಾಲಿಗೆ ಸಂಜೀವಿನಿಯಾಗಿ ಉಚಿತವಾಗಿ ರೋಗಿಗಳನ್ನು ಆಸ್ಪತ್ರೆಗೆ ಕರೆದ್ಯೊಯುತ್ತಿದ್ದಾರೆ. ಅಪಘಾತ ನಡೆದ ಮಾಹಿತಿ ಸಿಕ್ಕಕೂಡಲೇ ಸ್ಥಳಕ್ಕೆ ಧಾವಿಸಿ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸುತ್ತಾರೆ. ಇದರ ಜೊತೆಗೆ ಹೃದ್ರೋಗ ಜಾಗೃತಿ, ಉಚಿತ ನೇತ್ರ ಚಿಕಿತ್ಸೆ, ರಕ್ತದಾನ ಶಿಬಿರ ಆಯೋಜನೆ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೇ, ಬೇರೆ ಊರುಗಳಲ್ಲಿ ವೈದ್ಯರಾಗಿರುವ ಸಿರವಾರದ 50 ಜನ ವೈದ್ಯರನ್ನು ಒಂದೆಡೆ ಸೇರಿಸಿ ಆರೋಗ್ಯ ಶಿಬಿರಗಳನ್ನೂ ನಡೆಸಿದ್ದಾರೆ.



16 ವರ್ಷದ ಮೆಮೂನಾ ಖಾನ್ ಮತ್ತು ಆಕೆಯ ಸೋದರ 14 ವರ್ಷದ ಅಮೀರ್ ಖಾನ್ ಕ್ರಮವಾಗಿ 10 ಮತ್ತು 9ನೆ ತರಗತಿಯ ವಿದ್ಯಾರ್ಥಿಗಳು. ಕಳೆದೆರಡು ವರ್ಷಗಳಿಂದ ತಾವು ಉಳಿಸಿದ ಪುಡಿಗಾಸು ಮತ್ತು ಸರ್ಕಾರದಿಂದ ತಮಗೆ ಸಿಗುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನವನ್ನು ಒಟ್ಟುಗೂಡಿಸಿ ಮಧ್ಯಪ್ರದೇಶದ ನರಸಿಂಗ್‌ಪುರ ಜಿಲ್ಲೆಯ ಮಹಾರಾಣಿ ಲಕ್ಷ್ಮೀಬಾಯಿ ಬಾಲಕಿಯರ ಶಾಲೆಗೆ ಶೌಚಾಲಯ ನಿರ್ಮಿಸಲು ದಾನ ಮಾಡಿದ್ದಾರೆ. ಮಕ್ಕಳ ಈ ಪ್ರಯತ್ನಕ್ಕೆ ಅವರ ತಂದೆಯೂ ಕೈಜೋಡಿಸಿ ಪ್ರೋತ್ಸಾಹಿಸಿರುವುದು ವಿಶೇಷವಾಗಿದೆ.

ಕೌಶಿಕ್ ಮತ್ತು ಪಿಯೂಶ್ ದೆಹಲಿ ಐಐಟಿ ಕಾಲೇಜಿನಲ್ಲಿ ಸಹಪಾಠಿಗಳು. ಇವರಿಬ್ಬರೂ ಸೇರಿ ಗ್ರಾಮೀಣ ಭಾಗದಲ್ಲಿ ಲಭ್ಯವಿರುವ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಕೃಷಿಕರಿಗೆ ನೆರವಾಗುವ ಆಲೋಚನೆ ಮಾಡಿದರು. ತಮ್ಮ ಬಳಿಯಿದ್ದ ಮೂರು ಲಕ್ಷ ರೂಪಾಯಿಯನ್ನು ಬಂಡವಾಳವನ್ನಾಗಿ ಮಾಡಿಕೊಂಡು ಬಯೋಗ್ಯಾಸ್ ಘಟಕ ನಿರ್ಮಾಣ ಮಾಡಿಕೊಡುವ 'ಸಸ್ಟೇನೆಬಲ್ ಅರ್ಥ್ ಎನರ್ಜಿ ಸಲ್ಯೂಶನ್' ಎಂಬ ಕಂಪೆನಿಯನ್ನು ಆರಂಭಿಸಿದರು. ರೈತರ ಮೇಲಿನ ಕಾಳಜಿ, ಇಚ್ಛಾಶಕ್ತಿ ಮತ್ತು ಕಠಿಣ ಪರಿಶ್ರಮ ಇವರ ಯೋಜನೆಯನ್ನು ಅಭೂತಪೂರ್ವ ಯಶಸ್ಸಿನೆಡೆಗೆ ತೆಗೆದುಕೊಂಡು ಹೋಯಿತು. ಕೇವಲ 12 ಸಾವಿರ ರೂಪಾಯಿ ವೆಚ್ಚದಲ್ಲಿ ಬಯೋಗ್ಯಾಸ್ ಘಟಕ ನಿರ್ಮಾಣ ಮಾಡಿಕೊಡುವುದು ಈ ಸಂಸ್ಥೆಯ ವಿಶೇಷ. ಇದರ ಪರಿಣಾಮ ಇವರ ಬಯೋಗ್ಯಾಸ್ ಘಟಕ ನಿರ್ಮಾಣ ಕಂಪೆನಿ ಇಂದು ಕರ್ನಾಟಕ, ಆಂಧ್ರ, ತೆಲಂಗಾಣ, ಹರಿಯಾಣ, ಪಂಜಾಬ್, ಮಧ್ಯಪ್ರದೇಶ, ಮಹಾರಾಷ್ಟ್ರ ರಾಜ್ಯಗಳಲ್ಲಿ ಸಾಕಷ್ಟು ಕಡೆಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

BREAD FOR THE HUNGER NON PROFIT ORGANISATION



ಹಸಿದವರಿಗೆ ಅನ್ನ ನೀಡಬೇಕೆಂಬ ಮಹಾದಾಸೆಯಿಂದ ಹುಬ್ಬಳ್ಳಿಯ ಸುಜಾತಾ ಮದನೂರ್ ಎಂಬ ವಿದ್ಯಾರ್ಥಿನಿ 'ಬ್ರೆಡ್ ಫಾರ್ ದಿ ಹಂಗರ್' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದ್ದಾರೆ. ಈಕೆ ಜೊತೆಗೆ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಕೈಜೋಡಿಸಿದ್ದಾರೆ. ಪೋಷಕರು ನೀಡುವ ಪುಡಿಗಾಸಿನಲ್ಲಿ ಉಳಿದ ಹಣವನ್ನು ಬಡವರಿಗೆ ಊಟ ಕೊಡಲು ಬಳಸುತ್ತಿದ್ದಾರೆ. ಸುಜಾತಾಳಿಗೆ ಪೋಷಕರೇ ಬೆನ್ನೆಲುಬಾಗಿ ನಿಂತಿದ್ದಾರೆ. ಸುಜಾತಾ ತಾಯಿ ಮನೆಯಲ್ಲಿಯೇ ಉಪ್ಪಿಟ್ಟು, ಚಿತ್ರಾನ್ನ, ಪಲಾವ್, ಬೇಳೆಬಾತ್, ಅನ್ನ ಸಾಂಬಾರ್ ಹೀಗೆ ಅಡುಗೆಯನ್ನು ಸಿದ್ಧಪಡಿಸುತ್ತಾರೆ. ಕಾಲೇಜು ಮಗಿದ ತಕ್ಷಣ ಈ ವಿದ್ಯಾರ್ಥಿ ಪಡೆ ಊಟವನ್ನು ಪ್ಯಾಕ್ ಮಾಡಿಕೊಂಡು ಸ್ಕೂಟರ್ ಏರಿ ಹೊರಡುತ್ತಾರೆ. ನಗರದಲ್ಲೆಲ್ಲಾ ಸುತ್ತಾಡಿ ನಿರ್ಗತಿಕರು, ಅನಾಥರು, ಅಂಗವಿಕಲರಿಗೆ ಊಟ ನೀರು ಕೊಡುತ್ತಾರೆ. ವಯಸ್ಸಾದವರಿಗೆ ತಾವೇ ಊಟವನ್ನೂ ಮಾಡಿಸುತ್ತಾರೆ.



ಪುರುಷೋತ್ತಮ್ ಗುಪ್ತಾ ಮಹಾರಾಷ್ಟ್ರದ ಥಾಣೆಯ ಒಬ್ಬ ಆಟೋಚಾಲಕ. ರಸ್ತೆಯಲ್ಲಿ ಹೋಗುವಾಗ ತನ್ನ ಕಣ್ಣಿಗೆ ಕಂಡ ತಲೆಕಡಿಸಿಕೊಂಡು ನಿರ್ಜೀವವಾದ ಗಿಡಮರಗಳ ದಾರುಣ ಪರಿಸ್ಥಿತಿಗೆ ಮರುಗಿ ತಾವೇ ಅವುಗಳ ಜೀವವುಳಿಸಲು ಸಂಕಲ್ಪತೊಟ್ಟರು. ಕೆಲಸಕ್ಕೆ ಹೋಗುವಾಗ ಪ್ರತಿದಿನ ನೀರಿನ ಕ್ಯಾನ್ ಒಂದನ್ನು ತಮ್ಮೊಂದಿಗೆ ಒಯ್ಯತೊಡಗಿದರು. ರಸ್ತೆ ಬದಿಯ ಗಿಡಮರಗಳಿಗೆ ನಿರುಣಿಸಿದ್ದೇ ಅಲ್ಲದೆ ತಾವೇ ಹೊಸ ಸಸಿಗಳನ್ನೂ ನೆಡತೊಡಗಿದರು. ತನ್ನೊಬ್ಬನ ಪ್ರಯತ್ನ ಸಾಲದು ಎಂದರಿತು ಒಡನಾಡಿ ಆಟೋ ಚಾಲಕರನ್ನೂ ಹಸಿರುಳಿಸುವ ಕಾಯಕಕ್ಕೆ ಪ್ರೇರೇಪಿಸಿದರು. ಗುಪ್ತಾರ ಕೆಲಸಕ್ಕೆ ಬಲತುಂಬಲು ಅವರೊಂದಿಗೆ ಈಗ 50 ಚಾಲಕ ಮಿತ್ರರಿದ್ದಾರೆ. ಬರಿ ಗಿಡನೆಡುವುದಷ್ಟೇ ಅಲ್ಲದೇ ಇರುವ ಮರಸಸಿಗಳ ರಕ್ಷಣೆಯನ್ನೂ ಈ ಹಸಿರುತಂಡ ನಿರ್ವಹಿಸುತ್ತದೆ. ಇಷ್ಟು ಸಾಲದೆಂಬಂತೆ ಗುಪ್ತಾ ದಂಪತಿಗಳು ಇತ್ತೀಚಿಗೆ ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಎರಡು ಹೊಸ ಸಸಿಗಳನ್ನು ನೆಡುವ ಮೂಲಕ ಆಚರಿಸಿಕೊಂಡರು.

ಗುಜರಾತ್‌ನ ಸೂರತ್ ನಗರದ ಜಿತೇಂದ್ರ ಸಿಂಗ್ ಖಾಸಗಿ ಕಂಪೆನಿಯಲ್ಲಿ ರಕ್ಷಣಾ ಕರ್ಮಿಯಾಗಿ ಕಳೆದ 13 ವರ್ಷದಿಂದ ಕೆಲಸ ಮಾಡುತ್ತಾರೆ. ಪ್ರತಿ ನಿತ್ಯವೂ ತನ್ನೂರಿನ ಸಾರ್ವಜನಿಕ ಗ್ರಂಥಾಲಯಕ್ಕೆ ಭೇಟಿಕೊಡುವ ಸಿಂಗ್, ಪತ್ರಿಕೆಯಲ್ಲಿ ಯೋಧರ ಕುರಿತಾಗಿ ಬರುವ ಸುದ್ದಿಗಳನ್ನು ವಿಶೇಷವಾಗಿ ಗಮನಿಸುತ್ತಾರೆ. ಅದರಲ್ಲೂ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ವೀರ ಸೈನಿಕರ ಕುರಿತಾದ ವಿವರಗಳನ್ನು ಸಂಗ್ರಹಿಸಿ ನಂತರ ಅವರ ಪರಿವಾರಕ್ಕೆ ಸಾಂತ್ವನ ಪತ್ರಗಳನ್ನು ಕಳುಹಿಸುತ್ತಾರೆ. ಇಂದಿನವರೆಗೆ ಸುಮಾರು 3000 ಪತ್ರಗಳನ್ನು ಅಮರ ಯೋಧರ ಪರಿವಾರಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಜಿತೇಂದ್ರ ಕಳಿಸಿದ್ದಾರೆ. ಪ್ರತಿಪತ್ರದ ಮೂಲಕ ಯೋಧರ ಕೊಡುಗೆಯನ್ನು ಹೃತ್ಪೂರ್ವಕವಾಗಿ ಸ್ಮರಿಸುವುದಲ್ಲದೇ ಅವರ ಸಂಬಂಧಿಕರ ಮನೋಸ್ಥೈರ್ಯವನ್ನು ಕೊಂಡಾಡುವ ಸ್ಮರಣೀಯ ಕಾರ್ಯವನ್ನು ಮಾಡುತ್ತಿದ್ದಾರೆ.

## ನೋಟೀಸ್ ಬೋರ್ಡ್

### ಬದಲಾದ ಕೋಲ್ಗೇಟ್ ಬಂಡವಾಳ !
### ಕೋಲ್ಗೇಟ್‌ನ ಜಾಹಿರಾತು




1985 – ದೃಢ ಹಾಗೂ ಶಕ್ತಿಶಾಲಿ ಹಲ್ಲುಗಳಿಗಾಗಿ ಉಪ್ಪು ಮತ್ತು ಇದ್ದಿಲಿನಿಂದ ದೂರವಿರಿ

2016 – ನಿಮ್ಮ ಟೂತ್‌ಪೇಸ್ಟ್‌ನಲ್ಲಿ ಉಪ್ಪು / ಇದ್ದಿಲು ಇದೆಯೇ?

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17

1-10-2016



# ಭಾರತ ಪರಿಕ್ರಮ ಯಾತ್ರೆ : ಅಕ್ಟೋಬರ್ ಅಂತ್ಯಕ್ಕೆ ಕರ್ನಾಟಕ ಪ್ರವೇಶ



1504 ದಿನಗಳು

23 ರಾಜ್ಯಗಳು

20,880 ಕಿ.ಮೀ ಪಾದಯಾತ್ರೆ

1972 ಹಳ್ಳಿಗಳು

ಗ್ರಾಮ ವಿಕಾಸದ ಮೂಲಕ ದೇಶವಿಕಾಸದ ಉದ್ದೇಶದೊಂದಿಗೆ ಕಾಲ್ನಡಿಗೆಯಲ್ಲೇ ಭಾರತದ ವಿವಿಧ ರಾಜ್ಯಗಳನ್ನು ಸಂಚರಿಸುತ್ತಿರುವ ಭಾರತ ಪರಿಕ್ರಮ ಯಾತ್ರೆಯು ಮುಂದಿನ ಅಕ್ಟೋಬರ್ 25 ಅಥವಾ 28ರಂದು ಎರಡನೇ ಬಾರಿಗೆ ಕರ್ನಾಟಕವನ್ನು ಪ್ರವೇಶಿಸಲಿದೆ.


ಇದೀಗ ನೆರೆಯ ತೆಲಂಗಾಣ ರಾಜ್ಯದಲ್ಲಿರುವ ಸೀತಾರಾಮ ಕೆದಿಲಾಯರ (68) ನೇತೃತ್ವದ ಭಾರತ ಪರಿಕ್ರಮ ಯಾತ್ರೆಯು ಸೆಪ್ಟೆಂಬರ್ 24ರಂದು ಆಂಧ್ರಪ್ರದೇಶವನ್ನು ಮರಳಿ ಪ್ರವೇಶಿಸಲಿದೆ. ಸೆಪ್ಟೆಂಬರ್ 29ರಂದು ಪ್ರಸಿದ್ಧ ಮಂತ್ರಾಲಯ ದೇಗುಲಕ್ಕೆ ಭೇಟಿ ನೀಡಲಿರುವ ಯಾತ್ರೆಯು ಅಕ್ಟೋಬರ್ 21ರಂದು ಪುಟಪರ್ತಿ ದೇವಸ್ಥಾನಕ್ಕೆ ತಲುಪಲಿದೆ. ಅಕ್ಟೋಬರ್ 24ರಂದು ಆಂಧ್ರದ ಗೋರಂಟ್ಲಾ ಪ್ರದೇಶದ ಮೂಲಕ ಆಗಮಿಸಲಿರುವ ಯಾತ್ರೆಯು ಅಕ್ಟೋಬರ್ 25 ಅಥವಾ 28ರಂದು ಚಿಕ್ಕಬಳ್ಳಾಪುರದ ಬಾಗೇಪಲ್ಲಿ ತಾಲೂಕಿನ ಮುದ್ದೇನಹಳ್ಳಿಯನ್ನು ಪ್ರವೇಶಿಸಲಿದೆ. ನಂತರ ಸುಮಾರು 15 ದಿನಗಳ ಕಾಲ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳ ಆಯ್ದ ಕೆಲವು ಹಳ್ಳಿಗಳಲ್ಲಿ ಭಾರತ ಪರಿಕ್ರಮ ಯಾತ್ರೆಯು ಸಂಚರಿಸಲಿದ್ದು, ಬಳಿಕ ಮರಳಿ ಆಂಧ್ರ ಹಾಗೂ ತಮಿಳುನಾಡು ಮೂಲಕ ಕನ್ಯಾಕುಮಾರಿ ತಲುಪಲಿದೆ. ಮುಂದಿನ ಜುಲೈ 9, 2017 ಆಷಾಢ ಪೌರ್ಣಿಮೆಯಂದು ಭಾರತ ಪರಿಕ್ರಮ ಯಾತ್ರೆಯು ಕನ್ಯಾಕುಮಾರಿಯಲ್ಲಿ ಕೊನೆಗೊಳ್ಳಲಿದೆ. ಕರ್ನಾಟಕದಲ್ಲಿ ಪರಿಕ್ರಮ ಯಾತ್ರೆಯ ವಿವರಗಳಿಗಾಗಿ ಗುರುರಾಜ್ 8277082005 ಇವರನ್ನು ಸಂಪರ್ಕಿಸಲು ಕೋರಲಾಗಿದೆ.

# ಗಾಂಧೀಜಿಯವರ ಚಿಂತನೆಯಲ್ಲಿ ಸ್ವದೇಶಿ

ಗಾಂಧೀಜಿಯವರು ಜೀವನವನ್ನು ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಎಂದೆಲ್ಲಾ ಹೋಳುಗಳಂತೆ ವಿಭಜಿಸದೇ ಅದನ್ನು ಸಮಗ್ರವಾಗಿ ವೀಕ್ಷಿಸುತ್ತಿದ್ದರು. ಮಾನವನ ಪರಿಪೂರ್ಣ ವಿಕಾಸಕ್ಕೆ ಪೋಷಕವಾಗುವಂತೆ ಆಧ್ಯಾತ್ಮಿಕ, ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ತತ್ತ್ವಗಳನ್ನು ಅನ್ವಯಿಸಬೇಕೆಂಬುದು ಅವರ ಅಭಿಮತ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚರ್ತುವಿಧ ಪುರುಷಾರ್ಥಗಳ ವಿಚಾರಪೂರ್ವಕ, ನಿಷ್ಠಾವಂತ ಅನ್ವಯವೇ ಅವರ ಸಿದ್ಧಾಂತದ ಮೂಲಸೂತ್ರ.

ಗಾಂಧೀಜಿಯವರ ಚಿಂತನೆಯಂತೆ ಸ್ವದೇಶಿ ಎಂಬುದು ನಮ್ಮ ನಿಕಟ ವಾತಾವರಣಕ್ಕೆ ಅನ್ವಯಿಸುವ ಸ್ವಧರ್ಮ. ನೆರೆಹೊರೆಯವರು ತಯಾರಿಸಿದ ವಸ್ತುಗಳನ್ನು ಕೊಳ್ಳುವುದು. ಸ್ಥಳೀಯ ಮತ್ತು ದೇಶೀಯ ಉದ್ಯಮಗಳಿಗೆ ಉತ್ತೇಜನ ನೀಡುವುದು. ಅವುಗಳನ್ನವಲಂಬಿಸಿರುವ ಜನರ ಹಿತವನ್ನು ಈ ಮೂಲಕ ರಕ್ಷಿಸವುದು. ಇದುವೇ ಸ್ವದೇಶೀ ಧರ್ಮದ ಸರಳ ವಿಧಿ.

ಯಾವುದೇ ಆರ್ಥಿಕ ನಿಯಮ ಅಥವಾ ಪದ್ಧತಿ ಸರ್ವವ್ಯಾಪಕವಾಗಿರುವುದು ಸಾಧ್ಯವಿಲ್ಲ. ಆಯಾ ದೇಶಗಳ ಸ್ಥಿತಿಗತಿಗಳಿಗನುಗುಣವಾಗಿ ಅರ್ಥವ್ಯವಸ್ಥೆಯನ್ನು, ನಿಯಮಗಳನ್ನು ರೂಪಿಸಿಕೊಳ್ಳಬೇಕು. ಆದ್ದರಿಂದ ಸಂಖ್ಯಾಬಾಹುಳ್ಯವುಳ್ಳ ಗ್ರಾಮಾಧಾರಿತ ಭಾರತ ಪಾಶ್ಚಾತ್ಯರಾಷ್ಟ್ರಗಳ ಆರ್ಥಿಕ ಪದ್ಧತಿಯನ್ನು ಅನುಸರಿಸುವುದು ಸಾಧುವಲ್ಲ. ಹಳ್ಳಿಗಳ ದೇಶವಾದ ಭಾರತದ ಅರ್ಥವ್ಯವಸ್ಥೆ ಗ್ರಾಮಸ್ವಾವಲಂಬನೆಯ ಆಧಾರದ ಮೇಲೆಯೇ ನಿರ್ಮಾಣವಾಗಬೇಕು. ಇದು ಸ್ವಾವಲಂಬಿ ಭಾರತದ ಕುರಿತಾದ ಗಾಂಧೀಜಿಯವರ ಸ್ಪಷ್ಟ ನೀತಿ.



ಅಕ್ಟೋಬರ್ 2
ಗಾಂಧಿ ಜಯಂತಿ
ಪ್ರಯುಕ್ತ

ಪ್ರತಿಹಳ್ಳಿಯೂ ತನ್ನ ಅಗತ್ಯದ ವಸ್ತುಗಳನ್ನು ತಾನೇ ಉತ್ಪಾದಿಸಬೇಕು. ಗ್ರಾಮವ್ಯವಸ್ಥೆ ಕೃಷಿ ಮತ್ತು ಕುಟೀರ ಉದ್ಯಮಗಳ ಆಧಾರದ ಮೇಲೆ ನಿಲ್ಲಬೇಕು. ತನ್ನ ಬೇಡಿಕೆಯ ಆಹಾರ ಧಾನ್ಯ, ಹತ್ತಿ, ಎಣ್ಣೆಕಾಳು, ತರಕಾರಿ, ದನಗಳ ಮೇವು ಎಲ್ಲವನ್ನೂ ಉತ್ಪಾದಿಸುವುದು ಆಯಾ ಗ್ರಾಮವೇ. ಹತ್ತಿ ನೂತು ಬಟ್ಟೆಯನ್ನು ನೇಯ್ದುಕೊಳ್ಳಬೇಕು.

ಕೃಷಿ ಗ್ರಾಮೋದ್ಯೋಗಗಳಿಗೆ ಬೇಕಾದ ಉಪಕರಣಗಳು ಗ್ರಾಮದಲ್ಲೇ ತಯಾರಾಗಬೇಕು. ಆರೋಗ್ಯರಕ್ಷಣೆ, ನೈರ್ಮಲ್ಯ, ಗ್ರಾಮರಕ್ಷಣೆ ಎಲ್ಲವೂ ಹಳ್ಳಿಯವರದೇ ಜವಾಬ್ದಾರಿ. ಈ ರೀತಿಯಲ್ಲಿ ವ್ಯವಸ್ಥೆಯಾದರೆ ಪ್ರತಿ ಗ್ರಾಮವೂ ಸ್ವಾವಲಂಬಿ ಘಟಕವಾಗುತ್ತದೆ. ಭಾರತ ಸ್ವಾವಲಂಬಿ ಗ್ರಾಮಘಟಕಗಳ ಅಜೇಯ ಗಣರಾಜ್ಯವಾಗುತ್ತದೆ.

ಭಾರತದ ಲಕ್ಷಾಂತರ ಗ್ರಾಮಗಳ ಕೋಟಿಕೋಟಿ ಕುಟೀರಗಳಲ್ಲಿ ಅನುಭೋಗ ವಸ್ತುಗಳ ತಯಾರಿಕೆ ಸಮೃದ್ಧಿಯಾಗಿ ಆಗಬೇಕು. ಇಂಥ ವ್ಯವಸ್ಥೆಯಲ್ಲಿ ಪರಮಾವಧಿ ಉದ್ಯೋಗ, ಹೇರಳ ಉತ್ಪಾದನೆ, ಸ್ಥಳೀಯ ವಿತರಣೆ, ಶೋಷಣರಾಹಿತ್ಯ, ಕೆಲಸಗಾರನಿಗೆ ತಕ್ಕ ಕೌಶಲದ ಔನ್ನತ್ಯದ ಸಾಧನೆ ಮತ್ತು ತಾನೇ ಉತ್ಪಾದಿಸಿದೆನೆಂಬ ಸಂತೋಷ ಎಲ್ಲವೂ ಲಭ್ಯವಾಗುತ್ತವೆ.

ಇದು ಗಾಂಧೀಜಿಯವರ ಸುದೃಢ ಭಾರತದ ಕಲ್ಪನೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04.
ಮೊಬೈಲ್: 97391 83021

# ನಿಸ್ವಾರ್ಥ ಭಗೀರಥ



ಬದುಕು ಎಂದರೇನು? ಸಾರ್ಥಕ ಜೀವನ ಯಾವುದು? ಇದಕ್ಕೆ ಇಂತಹದ್ದೇ ಉತ್ತರ ಎನ್ನಲಾಗದಿದ್ದರೂ ಕೆಲವೊಂದು ಉದಾಹರಣೆಗಳನ್ನಂತೂ ನೀಡಬಹುದು. ಈ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿ ಕಾಣಸುವವರು ಅಲೋಕ್ ಸಾಗರ್.

ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿ ಕಾರ್ಯ ನಿರ್ವಹಿಸಿ ಇತ್ತೀಚಿಗೆ ನಿವೃತ್ತರಾದ ರಘುರಾಮ್ ರಾಜನ್‌ರಂಥ ಹಲವು ಪ್ರಖರ ವಿದ್ಯಾರ್ಥಿಗಳಿಗೆ ಐಐಟಿ ದೆಹಲಿಯಲ್ಲಿ ಪ್ರಾಧ್ಯಾಪಕರಾಗಿದ್ದ (1980ರ ದಶಕದಲ್ಲಿ) ಅಲೋಕ್ ಸಾಗರ್ ಅವರು ತಮ್ಮನ್ನು ಬಡತನ ಹಾಗು ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ತೊಡಗಿಸಿಕೊಂಡಿದ್ದಾರೆ. ಅವರ ಜೀವನ ರೋಚಕ ಮತ್ತು ಸ್ಫೂರ್ತಿದಾಯಕ.

ಮೂಲತಃ ದೆಹಲಿ ನಿವಾಸಿ ಅಲೋಕ್ ಸಾಗರ್ ಅವರು ದೆಹಲಿ ಐಐಟಿಯಲ್ಲಿ ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ ಪಡೆದು, ನಂತರ ಅಲ್ಲಿಯೇ ಸ್ನಾತಕೋತ್ತರ ಶಿಕ್ಷಣವನ್ನು ಮುಗಿಸಿ (1973ರಲ್ಲಿ), ಅಮೆರಿಕದ ಟೆಕ್ಸಾಸ್‌ನ ಹ್ಯೂಸ್ಟನ್ ವಿಶ್ವವಿದ್ಯಾಲಯದಿಂದ Ph.D ಪಡೆದು, ತಾಯ್ನಾಡಿಗೆ ಮರಳಿದರು. ದೆಹಲಿ ಐಐಟಿಯಲ್ಲಿ ಪ್ರಾಧ್ಯಾಪಕರಾಗಿ (1980ರಲ್ಲಿ) ವೃತ್ತಿಜೀವನ ಆರಂಭಿಸಿದರು. ಆದರೆ ಅವರ ಜೀವನಧ್ಯೇಯವೇ ಬೇರೆಯದಾಗಿತ್ತು. ಹೀಗಾಗಿ ಎರಡು ವರ್ಷಗಳಲ್ಲಿಯೇ (1982ರಲ್ಲಿ) ತಮ್ಮ ಪ್ರಾಧ್ಯಾಪಕ ಹುದ್ದೆಗೆ ವಿದಾಯ ಹೇಳಿ ತನ್ನ ಮನದಾಳದ ತುಡಿತದಂತೆ ಆದಿವಾಸಿ ಕಲ್ಯಾಣ ಹಾಗೂ ಪರಿಸರ ಸಂರಕ್ಷಣೆಯ ಸಮಾಜಮುಖಿ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ನಿಶ್ಚಯಿಸಿದರು.

ಅಂತೆಯೇ ಕಳೆದ 32 ವರ್ಷಗಳಿಂದ ಮಧ್ಯಪ್ರದೇಶದ ಬೇತುಲ್ ಹಾಗೂ ಹೊಶಾಂಗಬಾದ್ ಜಿಲ್ಲೆಗಳ ಆದಿವಾಸಿಗಳ ಕಲ್ಯಾಣಕ್ಕಾಗಿ ಅವಿರತವಾಗಿ ದುಡಿಯುತ್ತಿದ್ದಾರೆ. ಬೇತುಲ್ ಜಿಲ್ಲೆ ಒಂದರಲ್ಲೇ ಸುಮಾರು 50,000 ಗಿಡಗಳನ್ನು ನೆಟ್ಟು ಬೆಳೆಸುವ ಮೂಲಕ ಹಸಿರೀಕರಣ ಮಾಡಿ ಬರಡಾಗಿದ್ದ ಪ್ರದೇಶದಲ್ಲಿ ಮಳೆ ಬರಿಸಿ, ನೀರಿನ ಮಟ್ಟ ಹೆಚ್ಚಿಸುವಲ್ಲಿ ಅವಿಸ್ಮರಣೀಯ ಕೊಡುಗೆ ನೀಡಿದ್ದಾರೆ. ಆದಿವಾಸಿ ಕಲ್ಯಾಣದಲ್ಲಿಯೂ ತನ್ನನ್ನು ತೊಡಗಿಸಿಕೊಂಡಿರುವ ಇವರು 'ಶ್ರಮಿಕ್ ಆದಿವಾಸಿ ಸಂಘಟನೆ'ಯೊಂದಿಗೆ ಕೈ ಜೋಡಿಸಿ, ಪ್ರದೇಶದ ಆದಿವಾಸಿಗಳ ಜನ ಜೀವನ ಉತ್ತಮಗೊಳಿಸುವಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ಪ್ರಸಿದ್ಧಿ ಬಯಸದೇ ಕೆಲಸ ಮಾಡುತ್ತಿದ್ದ ಅಲೋಕ್ ಸಾಗರ್‌ರ ಈ ಜೀವನಕಾರ್ಯ ಹೊರಜಗತ್ತಿನ ಪರಿಚಿತವಾಗಿದ್ದು ವಿಚಿತ್ರ ಸನ್ನಿವೇಶವೊಂದರಿಂದ. ಇತ್ತೀಚಿನ ಘೋರಾಡೊಂಗ್ರಿ ವಿಧಾನಸಭೆ ಚುನಾವಣೆಯ ಸಂಧರ್ಭದಲ್ಲಿ ಅಲೋಕ್ ಸಾಗರ್‌ರವರ ಹಿನ್ನೆಲೆ ಕುರಿತು ಸಂಶಯ ಪಟ್ಟ ಸ್ಥಳೀಯ ಪೊಲೀಸರು, ರಕ್ಷಣಾ ದೃಷ್ಟಿಯಿಂದ ಅವರನ್ನು ಊರು ಬಿಡುವಂತೆ ಆಜ್ಞಾಪಿಸಿತು. ಸ್ಥಳೀಯ ಜನರು ಅವರ ಸಮಾಜಮುಖಿ ಸತ್ಕಾರ್ಯವನ್ನು ತಿಳಿಸಿದರು. ಹಿನ್ನೆಲೆ ವಿಚಾರಿಸಿದ ಪೊಲೀಸ್ ಅಧಿಕಾರಿಗಳಿಗೆ ಅವರ ವಿದ್ಯಾರ್ಹತೆ ಮತ್ತು ಪದವಿ ತಿಳಿದು ಚಕಿತರಾದರು. ಸಾಮಾನ್ಯರಲ್ಲಿ ಸಾಮಾನ್ಯರಂತೆ ಕಾಣುವ ಅಲೋಕ್ ಜ್ಞಾನದಲ್ಲಿ–ಸೇವೆಯಲ್ಲಿ ನಿಜವಾಗಿಯೂ ಸಾಗರವೇ ಆಗಿದ್ದರು.

ಜನಸೇವೆಗೆ, ಸಮಾಜಕ್ಕಾಗಿ ತುಡಿಯುವ ಮನಸ್ಸು ಮುಖ್ಯವೇ ಹೊರತು ಯಾವುದೇ ಪದವಿಯ, ಸಂಪನ್ಮೂಲದ ಆವಶ್ಯಕತೆ ಇಲ್ಲವೇ ಇಲ್ಲಾ ಎಂದು ಹೇಳುವ ಅಲೋಕ್ ಅವರು, ಆದಿವಾಸಿಗಳ ನಡುವೆ, ತಾನು ನೆಟ್ಟು ಪೋಷಿಸಿದ ಸಸ್ಯ ಸಂಕುಲಗಳ ನಡುವೆ ಸೈಕಲ್‌ನಲ್ಲಿ ಓಡಾಡಿಕೊಂಡು ಅತ್ಯಂತ ಸರಳ ಜೀವನ ನಡೆಸುತ್ತಿದ್ದಾರೆ. ಸೈಕಲ್ ಹಾಗೂ ಕೆಲ ಜೊತೆ ಬಟ್ಟೆ ಬಿಟ್ಟರೆ, ಬೇರೇನೂ ತನಗಾಗಿ ಇಟ್ಟುಕೊಂಡಿರದ ಇವರು, ಇದೆ ಪ್ರದೇಶದಲ್ಲಿ ಸಣ್ಣದೊಂದು ಗುಡಿಸಿಲಿನಲ್ಲಿ ವಾಸವಾಗಿದ್ದಾರೆ. ನೀರಿಗಾಗಿ ಬಡಿದಾಡುತ್ತಿರುವ ಈ ಸಮಯದಲ್ಲಿ ಅಲೋಕ್ ಸಾಗರ್ ಅವರಂತೆ ಎಲೆಮರೆಯ ಕಾಯಾಗಿ, ತನ್ನದೆಲ್ಲವನ್ನೂ ಜನರಿಗಾಗಿ, ಸಮಾಜದ ಹಿತಕ್ಕಾಗಿ, ಪರಿಸರ ಸಂರಕ್ಷಣೆ ಮತ್ತು ಮಳೆ ಬೆಳೆಯ ಸಮೃದ್ಧಿಗಾಗಿ ಅರ್ಪಿಸಿ ಶ್ರಮಿಸುತ್ತಿರುವುದೇ ನಮ್ಮೆಲ್ಲರಿಗೆ ಸ್ಫೂರ್ತಿ ಪ್ರೇರಣೆಯಾಗಬೇಕಲ್ಲವೇ?

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಮೊ: 97312 64009
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.